ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ ಕೆಆರ್‌ಎನ್‌ಎಸ್ - 19

2ನೇ ವರ್ಷ 15ನೇ ಸಂಚಿಕೆ ಕೊಪ್ಪ 9-12-1984 ಭಾನುವಾರ ಬೆಲೆ 40 ಪೈಸೆ

ಕ್ಷೇತ್ರದಲ್ಲಿ ತಲಾ 3 ಕಾಲುಸೇತುವೆ

ಶೃಂಗೇರಿ ತಾಲ್ಲೂಕಿಗೆ ಹಲವು ಕೊಡುಗೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ಕ್ಷೇತ್ರದ ಮೂರೂ ತಾ॥ಗಳಲ್ಲಿ ತಲಾ 3 ಕಾಲುಸೇತುವೆಗಳಿಗೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿ ಮಂಜೂರಾತಿ ದೊರೆತಿದ್ದು, ಈ ತಾಲ್ಲೂಕಿನ ಹೆರಾವರಿ, ಕೆಳಕೊಪ್ಪ ಹಾಗೂ ವರ್ಷದಲ್ಲಿ ಬಹಳ ಕಾಲ ದ್ವೀಪವಾಗಿ ಉಳಿಯುತ್ತಿದ್ದ ಕಾರ್ಕೆ ಊರಿಗೆ ಹುಂಬಳಕೇರಿಯ ಹತ್ತಿರ–ಹೀಗೆ ತಲಾ 1.50 ಲಕ್ಷ ರೂ ವೆಚ್ಚದಲ್ಲಿ ಸೇತುವೆಗಳನ್ನು ನಿರ್ಮಿಸಲಾಗುವುದು. ಬಹಳ ಕಾಲದಿಂದ ಇದ್ದ ಈ ಬೇಡಿಕೆಗಳ ಬಗ್ಗೆ ಶಾಸಕ ಗೋವಿಂದ ಗೌಡರ ಪಾದಯಾತ್ರೆ ಕಾಲದಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ಹಾಗೆಯೇ, ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯಲ್ಲಿ ಗಿರಿಜನ ಪ್ರದೇಶಗಳಾದ ಕೆ. ಮಸಿಗೆ, ಕಂಬಳಗದ್ದೆ, ಹಾದಿ ಮಾತೊಳ್ಳಿ ಮುಂತಾದ ರಸ್ತೆಗಳು ಹಾಗೂ ಶೃಂಗೇರಿ ಪ್ರೌಢ ಶಾಲೆಯ ಎರಡು ಕೊಠಡಿಗಳಿಗೆ—ಒಟ್ಟು 3.2 ಲಕ್ಷ ರೂ. ಮಂಜೂರಾಗಿದೆ. ಗ್ರಾಮೀಣ ಭೂ ರಹಿತರ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಮರ್ಕಲ್–ನಾಗೋಡು ರಸ್ತೆಗೆ 2.30 ಲಕ್ಷ ರೂ. ಮಾನಗಾರು ಜನತಾ ಕಾಲೋನಿ ರಸ್ತೆಗೆ 1.85 ಲಕ್ಷ ರೂ; 'ಹಳ್ಳಿ ಹೆದ್ದಾರಿ' ಯೋಜನೆಯಲ್ಲಿ ಮಾತೊಳ್ಳಿ ರಸ್ತೆಗೆ ಒಂದು ಸೇತುವೆ. ಹಾಗೂ ತಾ. ಬೋರ್ಡ್ ಮತ್ತು ಪಂಚಾಯ್ತಿ ವ್ಯಾಪ್ತಿಯ 52 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಗಾಗಿ ಜಿ.ಪ॥ ಜವಾಬೆಗೆ ವಹಿಸಿಕೊಳ್ಳುವುದು ಮುಂತಾದ ಯೋಜನೆಗಳಿಗಾಗಿ ಒಟ್ಟು 15 ಲಕ್ಷ ರೂ.ಗೂ ಹೆಚ್ಚು ಹಣ ಮಂಜೂರಾಗಿದೆ.

ಇದಕ್ಕಾಗಿ ತಾ॥ ಜನತಾ ಕಾರ್ಯದರ್ಶಿ ಕಚ್ಚೋಡಿ ಶ್ರೀನಿವಾಸ್ ತಾ॥ ಜನತೆಯ ಪರವಾಗಿ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಹಾಲ್ಮತ್ತೂರಲ್ಲಿ ಗ್ರಾಮೀಣ ಬ್ಯಾಂಕ್ ಶಾಖೆ ಆರಂಭ

(ವರದಿ: ಹು.ಲ.ರಮಾನಂದ)

ಹಾಲುತ್ತೂರು: 'ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕ್'ನ 14 ನೇ ಶಾಖೆಯನ್ನು ನ.30 ರಂದು ಇಲ್ಲಿ ಮಾಜಿ ಪಂಚಾಯ್ತಿ ಅಧ್ಯಕ್ಷ ಸೀತಾರಾಮ ಭಟ್ ಉದ್ಘಾಟಿಸಿದರು. ಹೆಚ್.ಡಿ.ಶ್ರೀನಿವಾಸ್ ಮುಖ್ಯ ಅತಿಥಿಯಾಗಿದ್ದು, ಬ್ಯಾಂಕಿನ ಅಧ್ಯಕ್ಷ ಕೆ.ಅಚ್ಚುತ ಪೈ ಜ್ಯೋತಿ ಬೆಳಗಿಸಿ, ಬ್ಯಾಂಕಿನ ಬಗ್ಗೆ ಕೆಲವು ಮಾಹಿತಿ ನೀಡಿದರು. ಬ್ಯಾಂಕಿನ ಮ್ಯಾನೇಜರ್ ಮಂಜುನಾಥ್ ವಂದಿಸಿದರು.

ಈ ಶಾಖೆಯಲ್ಲಿ 350 ಖಾತೆಗಳನ್ನು ತೆಗೆಯಲಾಗಿದ್ದು 1 ಲಕ್ಷ ರೂ. ಠೇವಣಿ ಸಂಗ್ರಹವಾಗಿದೆ.

ಬಸರೀಕಟ್ಟೆ: ಇಲ್ಲಿಗೆ ಸಮೀಪದ ಕಲ್ಲುಗುಡ್ಡೆ ಗ್ರಾಮದ ಬಾಳೆಕೊಡಿಗೆ ವೆಂಕಪ್ಪಯ್ಯ ಅವರ ಮನೆಯ 2 ಹೋರಿ ಎತ್ತುಗಳು ಕಳೆದ ವಾರ ಒಂದೇ ರಾತ್ರಿ ಹುಲಿಗೆ ಆಹಾರವಾದುದಾಗಿ ತಿಳಿದುಬಂದಿದೆ. ಈ ಬಗ್ಗೆ ಶೃಂಗೇರಿ ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 7–12 1984

ಸರಕು: 2649 – 3140

ಬೆಟ್ಟೆ: 1739 – 2081

ಗೊರಬಲು: 700 – 1339

ಭೂಮಿ ಕೋರಿ ದ.ಸಂ.ಸ.ಧರಣಿ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: 1982–83 ನೇ ಸಾಲಿನಲ್ಲಿ ತಹಸೀಲ್ದಾರ್.ಪ್ರಕಟಿಸಿದ ಭೂ ವಿಲೇವಾರಿ ಪಟ್ಟಿಯಲ್ಲಿ ದಲಿತರಿಗೆ 500 ಎಕರೆಗೂ ಹೆಚ್ಚು ಭೂಮಿಯನ್ನು ಮೀಸಲಿರಿಸಲಾಗಿದ್ದು ಈಗ ತಾ॥ ನಲ್ಲಿ ಹಂಚಿಕೆಗೆ ಜಮೀನೇ ಇಲ್ಲ ಎಂಬ ವಾತಾವರಣವನ್ನು ಪಟ್ಟಭದ್ರರು ಮತ್ತು ಅಧಿಕಾರಿಗಳು ಉಂಟುಮಾಡಿದ್ದಾರೆ.

ತಾ॥ ನಲ್ಲಿ 30 ಕ್ಕೂ ಹೆಚ್ಚು ದಲಿತರು ಸರ್ಕಾರಿ ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೆ ಆ ಜಮೀನುಗಳ ಹಕ್ಕು ಪತ್ರ ನೀಡುವಂತೆ ತಾ॥ ದಲಿತ ಸಂಘರ್ಷ ಸಮಿತಿ ಒತ್ತಾಯಿಸುತ್ತಲೇ ಇದೆ.

ತಾ॥ ನಲ್ಲಿ 100 ಕ್ಕೂ ಹೆಚ್ಚು ದಲಿತ ಒಕ್ಕಲು ಹಿತಗಾರರು ಪರಿಹಾರ ಕಾಣದೆ, ಅಧಿಕಾರಿಗಳ ನಿರ್ಲಕ್ಷ್ಯದಿಂದ ದಿಕ್ಕಾಪಾಲಾಗಿದ್ದಾರೆ. ಇಂಥ 76 ಪ್ರಕರಣಗಳ ಪಟ್ಟಿಮಾಡಿ ದ.ಸಂ.ಸ. ಅವರಿಗೆಲ್ಲ ಪರಿಹಾರಕ್ಕಾಗಿ ಒತ್ತಾಯಿಸುತ್ತ ಬಂದಿದೆ.

ಶಾಸಕರಿಂದಾಗಲಿ ಅಧಿಕಾರಿಗಳಿಂದಾಗಲಿ ಇನ್ನೂ ಪರಿಹಾರ ದೊರೆತಿಲ್ಲದ ಈ ಎಲ್ಲಾ ಬೇಡಿಕೆಗಳ ಬಗ್ಗೆ ಶೃಂಗೇರಿ ತಾ॥ ದ.ಸಂ.ಸ. ನ. 28 ರಂದು ಏರ್ಪಡಿಸಿದ್ದ ಧರಣಿಯಲ್ಲಿ

(4ನೇ ಪುಟಕ್ಕೆ)

ಕಮ್ಮರ್ಡಿ ಕಿ॥ ಕಾಲೇಜಿನ ರಜತೋತ್ಸವ

ಕಮ್ಮರಡಿ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ(ಪ್ರೌಢಶಾಲೆ ವಿಭಾಗದ) ರಜತೋತ್ಸವ ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ರಜತೋತ್ಸವ ಸ್ಮಾರಕ 'ಕಲಾಮಂದಿರ' ಉದ್ಘಾಟಿಸಿದ ರಾಜ್ಯ ಆರೋಗ್ಯ ಮಂತ್ರಿ ಡಾ॥ಹೆಚ್.ಎಲ್.ತಿಮ್ಮೇಗೌಡ ಅವರಿಗೆ ಕುಸುರಿಗೆ ಕೃಷ್ಣಪ್ಪ ಅವರು, ಕಾಲೇಜಿಗೆ ಗ್ರಂಥಾಲಯ, ಅಧ್ಯಾಪಕರ ವಸತಿ ಗೃಹಗಳು ಮತ್ತು ಕಾಲೇಜಿನ ಕಟ್ಟಡಗಳನ್ನು ಪೂರ್ಣಗೊಳಿಸುವುದು ಮುಂತಾದ ಬಗೆಗಿನ ಬೇಡಿಕೆಗಳನ್ನೊಳಗೊಂಡ ಬಿನ್ನವತ್ತಳೆ ಸಲ್ಲಿಸಿದರು. ಬೇಗಾನೆ ರಾಮಯ್ಯನವರ ಗೈರು ಹಾಜರಿಯಲ್ಲಿ 'ರಜತಾದ್ರಿ' ಸ್ಮರಣ ಸಂಚಿಕೆಯನ್ನು ಶಿವರಾಮ ಜೋಯ್ಸ್ ಬಿಡುಗಡೆಮಾಡಿದರು. ಮಾಜಿ ಪ್ರಿನ್ಸಿಪಾಲ್ ಮಂಜುನಾಥ್ ವಂದಿಸಿದರು.

(ವರದಿ: ಚಾವಲ್ಮನೆ ಸುರೇಶ್ ನಾಯಕ್)

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಚುನಾವಣೆ :

ಕಾಂಗ್ರೆಸ್‌ಗೆ 'ವಾಕ್ ಓವರ್' ಸುಲಭವಲ್ಲ

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸುಮಾರು ಮತದಾರರ ಪಾಲಿಗೆ ಈ ಸಲದ ಚುನಾವಣಾ ದೃಶ್ಯ ಸ್ವಲ್ಪ ವಿಲಕ್ಷಣವಾಗಿ ಕಂಡರೆ ಆಶ್ಚರ್ಯವಿಲ್ಲ. ಏಕೆಂದರೆ ಕಾಂಗ್ರೆಯೇತರ ಮತದಾರರೆಂದರೆ ಮುಖ್ಯವಾಗಿ ಜನತಾ ಮತ್ತು ಬಿಜೆಪಿ ಬೆಂಬಲಿಗರಾಗಿದ್ದು, ಆ ಎರಡು ಪಕ್ಷಗಳೂ ಅಭ್ಯರ್ಥಿಗಳನ್ನು ನಿಲ್ಲಿಸಿಲ್ಲ. ಬದಲಿಗೆ ಒಬ್ಬ ಕಮ್ಯುನಿಸ್ಟ್ ಅಭ್ಯರ್ಥಿ– ಸಿಪಿಐ ನ ಬಿ.ಕೆ. ಚಂದ್ರಶೇಖರ್–ಜನತಾ ಪಕ್ಷದ ಬೆಂಬಲಿತರಾಗಿ ಮತದಾರರೆದುರು ನಿಂತಿದ್ದಾರೆ. ಕಮ್ಯುನಿಸ್ಟ್ ಪಕ್ಷವೊಂದಕ್ಕೆ ಮತ ನೀಡಬೇಕಾಗಿರುವ ಪ್ರಸಂಗ ಇಲ್ಲಿನ ಮತದಾರರಿಗೆ ಹೊಸದು. ಹಾಗೆಯೇ ರೈತ ಸಂಘ ಹುಟ್ಟು ಹಾಕಿರುವ 'ಮತದಾರರ ವೇದಿಕೆ' ಯೂ ಹೊಸ ಅನುಭವ.(ಇದರ ಅಭ್ಯರ್ಥಿ ಕೆ. ಲೋಕೇಶ ಗೌಡ.) ಇಲ್ಲಿ ಮುಖ್ಯ ಸ್ಪರ್ಧೆ ಇರುವುದು ಈ ಮೂವರಲ್ಲಿ ಮಾತ್ರ.

ಈಗಾಗಲೇ ಕಾಂಗ್ರೆಸ್‌ನ ಕು॥ ಡಿ.ಕೆ. ತಾರಾದೇವಿ ಗೆದ್ದೇ ಬಿಟ್ಟಿರುವನ್ನು ಸಲೀಸಿನಿಂದ ಕಾಂಗ್ರೆಸ್ ಕಾರ್ಯಕರ್ತರು ಓಡಾಡುತ್ತಿದ್ದಾರೆ. (ಹಾಗಂತ ಪಕ್ಷದ ಒಳಗೇ ಅಸಮಾಧಾನವೂ ಇರುವಂತೆ ಇವರುಗಳ ಒಳಗೊಳಗೆ ಸ್ವಲ್ಪ 'ಪುಕ್ಕು' ಇದ್ದರೂ ಆಶ್ಚರ್ಯವಿಲ್ಲ!)

ಕಾಂಗ್ರೆಸ್ ಲೆಕ್ಕಾಚಾರ

ಅವರ ಆತ್ಮವಿಶ್ವಾಸಕ್ಕೆ ಪ್ರಮುಖ ಕಾರಣ ಸಮರ್ಥನಾದ ಅಭ್ಯರ್ಥಿ ಕಣದಲ್ಲಿಲ್ಲದಿರುವುದು. ಕಳೆದ ವಿಧಾನಸಭಾ ಚುನಾವಣೆಗಳವರೆಗೆ ಈ ಕ್ಷೇತ್ರದಲ್ಲಿ ಅವಿಚ್ಛಿನ್ನವಾಗಿದ್ದ ಇಂದಿರಾ ಪ್ರಭಾವ ಅನಂತರ ದಿಢೀರನೆ ಕುಸಿದಿದ್ದರೂ ಈಚಿನ ಘಟನಾವಳಿಗಳಿಂದಾಗಿ ಮತದಾರರ ಒಲವು ಪುನಃ ತಮ್ಮ ಪಕ್ಷದತ್ತ ತಿರುಗಿದೆಯೆಂದು ಕಾಂಗ್ರೆಸ್ಸಿನವರು ಹೇಳುತ್ತಾರೆ. ಇದರ ನಿಜವಾದ ಪರೀಕ್ಷೆ ನಡೆಯಲು ಕಣದಲ್ಲಿ ಜನತಾ ಅಭ್ಯರ್ಥಿ ಇಲ್ಲವಾಗಿದೆ.

ಇನ್ನು ಕಮ್ಯುನಿಸ್ಟ್ ಪಕ್ಷ ಮತ್ತು ರೈತ ಸಂಘ ಇನೆರಡೂ ಇಡೀ ಕ್ಷೇತ್ರದಾದ್ಯಂತ ಎಲ್ಲಾ ಸ್ತರಗಳ ಜನರಲ್ಲೂ ಪ್ರಭಾವವನ್ನು ಹೊಂದಿಲ್ಲ. ರೈತ ಸಂಘ ಎಲ್ಲಾ ಕಡೆ ಪ್ರಚಾರದಲ್ಲಿದೆಯಾದರೂ ಚುನಾವಣೆ ಗೆಲ್ಲುವಷ್ಟು ಮತ ಪಡೆಯಬಲ್ಲ ಸಾಮರ್ಥ್ಯ ಅದಕ್ಕೆ ಇನ್ನೂ ಇಲ್ಲ. ಕಮ್ಯುನಿಸ್ಟ್ ಪಕ್ಷವೂ ಎಲ್ಲಾ ಜನರಿಗೂ ಪರಿಚಿತವಿದೆ–ಆದರೆ ಅದು ಕಮ್ಯುನಿಸಂ ವಿರುದ್ಧದ ಪ್ರಚಾರದಿಂದ ಹಾಗೂ ಕಮ್ಯುನಿಸ್ಟರ ಹಲವು ತಪ್ಪುಗಳ ಗುರುತಿನಿಂದ ಹೊರತು ಕಮ್ಯುನಿಸಂ ಎಂದರೆ ಏನು ಎಂಬ ಸರಿಯಾದ ತಿಳುವಳಿಕೆಯಿಂದಲ್ಲ.

ಕಮ್ಯುನಿಸ್ಟ್ ಪಕ್ಷ ಸಾಮಾನ್ಯವಾಗಿ ಅವಲಂಬಿಸಬಹುದಾದ ಕಾರ್ಮಿಕ ವರ್ಗ ಇಲ್ಲಿನ 6,77,642 ಮತದಾರರ ಪೈಕಿ ಕೇವಲ 80 ಸಾವಿರದಷ್ಟಿದ್ದು, ಅದರಲ್ಲೂ ಒಂದು ದೊಡ್ಡ ಭಾಗ ಕಾಂಗ್ರೆಸ್‌ನ 'ಇಂಟಕ್' ಕಾರ್ಮಿಕ ಸಂಘಟನೆ ಮತ್ತು ಇತರ ಹಲವು ಸಮಯ ಸಾಧಕರ ನೇತೃತ್ವದಲ್ಲಿದೆ.

ಇತ್ತ ಜನತಾ ಪಕ್ಷ ಸಿಪಿಐಯನ್ನು ತಾತ್ವಿಕ ದೃಷ್ಟಿಯಿಂದ ಬೆಂಬಲಿಸಿದ್ದರೂ ಆ ಪಕ್ಷದ ಎಲ್ಲರೂ ಸಿಪಿಐ ಬಗ್ಗೆ ಪ್ರೀತಿ ಹೊಂ

(4 ನೇ ಪುಟಕ್ಕೆ)

ಶೃಂಗೇರಿ ಕಾಂಗ್ರೆಸ್ ಒಳಗೆ....

ಬೇಗಾನೆ ರಾಮಯ್ಯನವರ ಸೋಲಿನ ನಂತರ ಈ ವರೆಗೂ (ಅಥವಾ ಮುಂಚೆ ಸಹ) ಅಷ್ಟಾಗಿ ಗಮನಿಸಲ್ಪಡದೆ ಯುವಕರ ಭಿನ್ನ ಮತೀಯ ಗುಂಪಿಗೆ ಸೇರಿ ಸೆಣೆಸುದಿಗೆ ಬಿದ್ದಿದ್ದ ಕಾಂಗ್ರೆಸ್ ಯುವ ಶಕ್ತಿ ತಟ್ಟನೆ ಎಚ್ಚೆತ್ತು ಚೇತನ ಪಡೆದು, ಚುನಾವಣಾ ವ್ಯವಹಾರಗಳಲ್ಲಿ ತಮ್ಮ ನಾಯಕತ್ವವೇ ಮೇಲಾಗುವುದೆಂದು ಖಾತ್ರಿ ಪಡಿಸಿಕೊಂಡು ಚಟುವಟಿಕೆಗೆ ತೊಡಗಿದೆ. ಕೆಲವೇ ದಿನ ಹಿಂದೆ 'ನಿಮ್ಮದು ಯಾವ ಪಕ್ಷ, ಏನು ಗದ್ದುಗೆ?' ಎಂದರೆ "ಗೊತ್ತಿಲ್ಲ, ನಾವೆಲ್ಲ ಲೆಕ್ಕಕ್ಕಿಲ್ಲದ ಜನ" ಎನ್ನುತ್ತಿದ್ದ ಕೃಷ್ಣಪ್ಪಗೌಡ ತಮ್ಮ ಹಳೆಯ ಸ್ನೇಹಿತೆಯಾದ ತಾರಾದೇವಿಯ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಹಾಗೂ ಪುಟ್ಟೇಗೌಡ, ರಾಮಯ್ಯ ಅವರ ಗುಂಪಿಗೆ ಸ್ವಲ್ಪ ಸೋಲು ಹಿಡಿದಂತೆ ಕಾಣುತ್ತದೆ.

ತಾರಾದೇವಿಯ ಆಯ್ಕೆಯ ನಂತರ ಜನತಾ ಪಕ್ಷವೊಂದಿಗೆ ಚಿಕ್ಕನ ಹೆಜ್ಜೆ ಇಡುತ್ತ ಬಂದ ಕೆಲವರು ಈಗ ಕಾಂಗ್ರೆಸ್ ಒಳಗೆ ಗಟ್ಟಿ ಮಾಡಿಕೊಂಡಿದ್ದಾರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು ರಾಜ್ಯದ ಜನತಾ ಸರ್ಕಾರ ಉರುಳಿ ಬೀಳುವುದೆಂದು ಗಟ್ಟಿಯಾಗಿ ನಂಬಿ ಯುವ ಶಕ್ತಿ ಈಗ ಬಿರುಸಿನಿಂದ ಓಡಾಡುತ್ತಿದೆ; ಅಲ್ಲಲ್ಲಿ ಗುಂಪು ಗುಂಪಾಗಿ ಮಾತುಕತೆ ಪ್ರಾರಂಭಿಸಿದ್ದಾರೆ.

ಭಿನ್ನ ಮತೀಯ ಗುಂಪು ಮಾತ್ರ ಪೆಟ್ಟು ಒಳಗಿನ ಉರಿಯಿಂದ ಸುಟ್ಟು ಬಿಡುತ್ತಿದ್ದಾರೆ.

—ಕಲ್ಕುಳಿ ವಿಠಲ ಹೆಗ್ಡೆ

ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ ಕೆಆರ್ ಎನ್ ಎಸ್ - 19

2ನೇ ವರ್ಷ 15ನೇ ಸಂಚಿಕೆ ಕೊಪ್ಪ 9-12-1984 ಭಾನುವಾರ ಬೆಲೆ 40 ಪೈಸೆ

ಕ್ಷೇತ್ರದಲ್ಲಿ ತಲಾ 3 ಕಾಲು ಸೇತುವೆ

ಶೃಂಗೇರಿ ತಾಲ್ಲೂಕಿಗೆ ಹಲವು ಕೊಡುಗೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ಕ್ಷೇತ್ರದ ಮೂರೂ ತಾ॥ ಗಳಲ್ಲಿ ತಲಾ 3 ಕಾಲುಸೇತುವೆಗಳಿಗೆ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಡಿ ಮಂಜೂರಾತಿ ದೊರೆತಿದ್ದು, ಈ ತಾಲ್ಲೂಕಿನ ಹರಾವರಿ, ಕೆಳಕೊಪ್ಪ ಹಾಗೂ ವರ್ಷದಲ್ಲಿ ಬಹಳ ಕಾಲ ದ್ವೀಪವಾಗಿ ಉಳಿಯುತ್ತಿದ್ದ ಕಾರ್ಕೆ ಊರಿಗೆ ಹುಂಬಳಕೇರಿಯ ಹತ್ತಿರ—ಹೀಗೆ ತಲಾ 1.50 ಲಕ್ಷ ರೂ ವೆಚ್ಚದಲ್ಲಿ ಸೇತುವೆಗಳನ್ನು ನಿರ್ಮಿಸಲಾಗುವುದು. ಬಹಳ ಕಾಲದಿಂದ ಇದ್ದ ಈ ಬೇಡಿಕೆಗಳ ಬಗ್ಗೆ ಶಾಸಕ ಗೋವಿಂದ ಗೌಡರ ಪಾದಯಾತ್ರೆ ಕಾಲದಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ಹಾಗೆಯೇ, ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯಲ್ಲಿ ಗಿರಿಜನ ಪ್ರದೇಶಗಳಾದ ಕೆ. ಮಸಿಗೆ, ಕಂಬಳಗದ್ದೆ, ಹಾದಿ ಮಾತೊಳ್ಳಿ ಮುಂತಾದ ರಸ್ತೆಗಳು ಹಾಗೂ ಶೃಂಗೇರಿ ಪ್ರೌಢ ಶಾಲೆಯ ಎರಡು ಕೊಠಡಿಗಳಿಗೆ—ಒಟ್ಟು 3.2 ಲಕ್ಷ ರೂ. ಮಂಜೂರಾಗಿದೆ. ಗ್ರಾಮೀಣ ಭೂ ರಹಿತರ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಮರ್ಕಲ್-ಮಾಗೋಡು ರಸ್ತೆಗೆ 2.30 ಲಕ್ಷ ರೂ, ಮಾನಗಾರು ಜನತಾ ಕಾಲೋನಿ ರಸ್ತೆಗೆ 1.85 ಲಕ್ಷ ರೂ; 'ಹಳ್ಳಿ ಹೆದ್ದಾರಿ' ಯೋಜನೆಯಲ್ಲಿ ಮಾತೊಳ್ಳಿ ರಸ್ತೆಗೆ ಒಂದು ಸೇತುವೆ, ಹಾಗೂ ತಾ. ಬೋರ್ಡ್ ಮತ್ತು ಪಂಚಾಯ್ತಿ ವ್ಯಾಪ್ತಿಯ 52 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಗಾಗಿ ಲೋ॥ ಇಲಾಖೆಗೆ ವಹಿಸಿಕೊಳ್ಳುವುದು ಮುಂತಾದ ಯೋಜನೆಗಳಿಗಾಗಿ ಒಟ್ಟು 15 ಲಕ್ಷ ರೂ.ಗೂ ಹೆಚ್ಚು ಹಣ ಮಂಜೂರಾಗಿದೆ.

ಇದಕ್ಕಾಗಿ ತಾ॥ ಜನತಾ ಕಾರ್ಯದರ್ಶಿ ಕಚ್ಚೋಡಿ ಶ್ರೀನಿವಾಸ್ ತಾ॥ ಜನತೆಯ ಪರವಾಗಿ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಹಾಲ್ಮುತ್ತೂರಲ್ಲಿ ಗ್ರಾಮೀಣ ಬ್ಯಾಂಕ್ ಶಾಖೆ ಆರಂಭ

(ವರದಿ: ಹು.ಲ.ರಮಾನಂದ)

ಹಾಲುತ್ತೂರು: 'ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕ್'ನ 14 ನೇ ಶಾಖೆಯನ್ನು ನ.30 ರಂದು ಇಲ್ಲಿ ಮಾಜಿ ಪಂಚಾಯ್ತಿ ಅಧ್ಯಕ್ಷ ಸೀತಾರಾಮ ಭಟ್ ಉದ್ಘಾಟಿಸಿದರು. ಹೆಚ್.ಡಿ.ಶ್ರೀನಿವಾಸ್ ಮುಖ್ಯ ಅತಿಥಿಯಾಗಿದ್ದು, ಬ್ಯಾಂಕಿನ ಅಧ್ಯಕ್ಷ ಕೆ.ಅಚ್ಯುತ ಪೈ ಜ್ಯೋತಿ ಬೆಳಗಿ, ಬ್ಯಾಂಕಿನ ಬಗ್ಗೆ ಕೆಲವು ಮಾಹಿತಿ ನೀಡಿದರು. ಬ್ಯಾಂಕಿನ ಮ್ಯಾನೇಜರ್ ಮಂಜುನಾಥ್ ವಂದಿಸಿದರು.

ಈ ಶಾಖೆಯಲ್ಲಿ 350 ಖಾತೆಗಳನ್ನು ತೆಗೆಯಲಾಗಿದ್ದು 1 ಲಕ್ಷ ರೂ. ಠೇವಣಿ ಸಂಗ್ರಹವಾಗಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 7-12 1984

ಸರಕು: 2649 – 3140

ಚಿಟ್ಟೆ: 1739 – 2081

ಗೊರಬಲು: 700 – 1339

ಬಸರೀಕಟ್ಟೆ: ಇಲ್ಲಿಗೆ ಸಮೀಪದ ಕಲ್ಲುಗುಡ್ಡೆ ಗ್ರಾಮದ ಬಾಳೆಕೊಡಿಗೆ ವೆಂಕಪ್ಪಯ್ಯ ಅವರ ಮನೆಯ 2 ಹೋರಿ ಎತ್ತುಗಳು ಕಳೆದ ವಾರ ಒಂದೇ ರಾತ್ರಿ ಹುಲಿಗೆ ಆಹಾರವಾದುದಾಗಿ ತಿಳಿದುಬಂದಿದೆ. ಈ ಬಗ್ಗೆ ಶೃಂಗೇರಿ ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದೆ.

ಭೂಮಿ ಕೋರಿ ದ.ಸಂ.ಸ.ಧರಣಿ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: 1982–83 ನೇ ಸಾಲಿನಲ್ಲಿ ತಹಸೀಲ್ದಾರ್ ಪ್ರಕಟಿಸಿದ ಭೂ ವಿಲೇವಾರಿ ಪಟ್ಟಿಯಲ್ಲಿ ದಲಿತರಿಗೆ 500 ಎಕರೆಗೂ ಹೆಚ್ಚು ಭೂಮಿಯನ್ನು ಮೀಸಲಿರಿಸಲಾಗಿದ್ದು ಈಗ ತಾ॥ ನಲ್ಲಿ ಹಂಚಿಕೆಗೆ ಜಮೀನೇ ಇಲ್ಲ ಎಂಬ ವಾತಾವರಣವನ್ನು ಪಟ್ಟಭದ್ರರು ಮತ್ತು ಅಧಿಕಾರಿಗಳು ಉಂಟುಮಾಡಿದ್ದಾರೆ.

ತಾ॥ ನಲ್ಲಿ 30 ಕ್ಕೂ ಹೆಚ್ಚು ದಲಿತರು ಸರ್ಕಾರಿ ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೆ ಆ ಜಮೀನುಗಳ ಹಕ್ಕು ಪತ್ರ ನೀಡುವಂತೆ ತಾ॥ ದಲಿತ ಸಂಘರ್ಷ ಸಮಿತಿ ಒತ್ತಾಯಿಸುತ್ತಲೇ ಇದೆ.

ತಾ॥ ನಲ್ಲಿ 100 ಕ್ಕೂ ಹೆಚ್ಚು ದಲಿತ ಜೀತಗಾರರು ಪರಿಹಾರ ಕಾಣದೆ, ಅಧಿಕಾರಿಗಳ ನಿರ್ಲಕ್ಷದಿಂದ ದಿಕ್ಕಾಪಾಲಾಗಿದ್ದಾರೆ. ಇಂಥ 76 ಪ್ರಕರಣಗಳ ಪಟ್ಟಿಮಾಡಿ ದ.ಸಂ.ಸ. ಅವರಿಗೆಲ್ಲ ಪರಿಹಾರಕ್ಕಾಗಿ ಒತ್ತಾಯಿಸುತ್ತ ಬಂದಿದೆ.

ಶಾಸಕರಿಂದಾಗಲಿ ಅಧಿಕಾರಿಗಳಿಂದಾಗಲಿ ಇನ್ನೂ ಪರಿಹಾರ ದೊರೆತಿಲ್ಲದ ಈ ಎಲ್ಲಾ ಬೇಡಿಕೆಗಳ ಬಗ್ಗೆ ಶೃಂಗೇರಿ ತಾ॥ ದ.ಸಂ.ಸ. ನ. 28 ರಂದು ಏರ್ಪಡಿಸಿದ್ದ ಧರಣಿಯಲ್ಲಿ

(4ನೇ ಪುಟಕ್ಕೆ)

ಕಮ್ಮರ್ಡಿ ಕಿ॥ ಕಾಲೇಜಿನ ರಜತೋತ್ಸವ

ಕಮ್ಮರಡಿ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ(ಪ್ರೌಢಶಾಲೆ ವಿಭಾಗದ) ರಜತೋತ್ಸವ ಶಾಸಕ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ರಜತೋತ್ಸವ ಸ್ಮಾರಕ 'ಕಲಾಮಂದಿರ' ಉದ್ಘಾಟಿಸಿದ ರಾಜ್ಯ ಆರೋಗ್ಯ ಮಂತ್ರಿ ಡಾ॥ಹೆಚ್.ಎಲ್.ತಿಮ್ಮೇಗೌಡ ಅವರಿಗೆ ಕುಸುರಿಗೆ ಕೃಷ್ಣಪ್ಪ ಅವರು, ಕಾಲೇಜಿಗೆ ಗ್ರಂಥಾಲಯ, ಅಧ್ಯಾಪಕರ ವಸತಿ ಗೃಹಗಳು ಮತ್ತು ಕಾಲೇಜಿನ ಕಟ್ಟಡಗಳನ್ನು ಪೂರ್ಣಗೊಳಿಸುವುದು ಮುಂತಾದ ಬಗೆಗಿನ ಬೇಡಿಕೆಗಳನ್ನೊಳಗೊಂಡ ಬಿನ್ನವತ್ತಳೆ ಸಲ್ಲಿಸಿದರು. ಬೇಗಾನೆ ರಾಮಯ್ಯನವರ ಗೈರು ಹಾಜರಿಯಲ್ಲಿ 'ರಜತಾದ್ರಿ' ಸ್ಮರಣ ಸಂಚಿಕೆಯನ್ನು ಶಿವರಾಮ ಜೋಯ್ಸ್ ಬಿಡುಗಡೆಮಾಡಿದರು. ಮಾಜಿ ಪ್ರಿನ್ಸಿಪಾಲ್ ಮಂಜುನಾಥ್ ವಂದಿಸಿದರು.

(ವರದಿ: ಚಾವಲ್ಮನೆ ಸುರೇಶ್ ನಾಯಕ್)

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಚುನಾವಣೆ :

ಕಾಂಗ್ರೆಗೆ 'ವಾಕ್ ಓವರ್' ಸುಲಭವಲ್ಲ

ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಬಹುಪಾಲು ಮತದಾರರ ಪಾಲಿಗೆ ಈ ಸದ ಚುನಾವಣಾ ದೃಶ್ಯ ಸ್ವಲ್ಪ ವಿಲಕ್ಷಣವಾಗಿ ಕಂಡರೆ ಆಶ್ಚರ್ಯವಿಲ್ಲ. ಏಕೆಂದರೆ ಇಲ್ಲಿ ಕಾಂಗ್ರೆಯೇತರ ಮತದಾರರೆಂದರೆ ಮುಖ್ಯವಾಗಿ ಜನತಾ ಮತ್ತು ಬಿಜೆಪಿ ಬೆಂಬಲಿಗರಾಗಿದ್ದು, ಆ ಎರಡು ಪಕ್ಷಗಳೂ ಅಭ್ಯರ್ಥಿಗಳನ್ನು ನಿಲ್ಲಿಸಿಲ್ಲ. ಬದಲಿಗೆ ಒಬ್ಬ ಕಮ್ಯುನಿಸ್ಟ್ ಅಭ್ಯರ್ಥಿ– ಸಿಪಿಐ ನ ಬಿ.ಕೆ. ಸುಂದರೇಶ್–ಜನತಾ ಪಕ್ಷದ ಬೆಂಬಲಿತರಾಗಿ ಮತದಾರರೆದುರು ನಿಂತಿದ್ದಾರೆ. ಕಮ್ಯುನಿಸ್ಟ್ ಪಕ್ಷವೊಂದಕ್ಕೆ ಮತ ನೀಡಬೇಕಾಗಿರುವ ಪ್ರಸಂಗ ಇಲ್ಲಿನ ಮತದಾರರಿಗೆ ತೀರ ಹೊಸದು. ಹಾಗೆಯೇ ರೈತ ಸಂಘ ಕಟ್ಟಿ ಹಾಕಿರುವ 'ಮತದಾರರ ವೇದಿಕೆ' ಯೂ ಹೊಸ ಅನುಭವ.(ಇದರ ಅಭ್ಯರ್ಥಿ ಕೆ. ಲೋಕೇಶ ಗೌಡ.) ಇಲ್ಲಿ ಮುಖ್ಯ ಸ್ಪರ್ಧೆ ಇರುವುದು ಈ ಮೂವರಲ್ಲಿ ಮಾತ್ರ. ಈಗಾಗಲೇ ಕಾಂಗ್ರೆಯ ಕು॥ ಡಿ.ಕೆ. ತಾರಾದೇವಿ ಗೆದ್ದೇ ಬಿಟ್ಟಿರುವಷ್ಟು ಸಲೀಸಿನಿಂದ ಕಾಂಗ್ರೆ ಕಾರ್ಯಕರ್ತರು ಓಡಾಡುತ್ತಿದ್ದಾರೆ. (ಹಾಗಂತ ಪಕ್ಷದ ಒಳಗೇ ಅಸಮಾಧಾನವೂ ಇರುವಂತೆ ಇವರುಗಳ ಒಳಗೊಳಗೆ ಸ್ವಲ್ಪ 'ಪುಕ್ಕು' ಇದ್ದರೂ ಆಶ್ಚರ್ಯವಿಲ್ಲ)

ಕಾಂಗ್ರೆ ಲೆಕ್ಕಾಚಾರ

ಈ ಆತ್ಮವಿಶ್ವಾಸಕ್ಕೆ ಪ್ರಮುಖ ಕಾರಣ ಜನತಾದ ಅಭ್ಯರ್ಥಿ ಕಣದಲ್ಲಿಲ್ಲದಿರುವುದು. ಕಳೆದ ವಿಧಾನಸಭಾ ಚುನಾವಣೆಗಳವರೆಗೆ ಈ ಕ್ಷೇತ್ರದಲ್ಲಿ ಅವಿಚ್ಛಿನ್ನವಾಗಿದ್ದ ಇಂದಿರಾ ಪ್ರಭಾವ ಅನಂತರ ದಿಢೀರನೆ ಕುಸಿದಿದ್ದರೂ ಈಚಿನ ಘಟನಾವಳಿಗಳಿಂದಾಗಿ ಮತದಾರರ ಒಲವು ಪುನಃ ತಮ್ಮ ಪಕ್ಷದತ್ತ ತಿರುಗಿದೆಯೆಂದು ಕಾಂಗ್ರೆನವರು ಹೇಳುತ್ತಾರೆ. ಇದರ ನಿಜವಾದ ಪರೀಕ್ಷೆ ನಡೆಯಲು ಕಣದಲ್ಲಿ ಜನತಾ ಅಭ್ಯರ್ಥಿ ಇಲ್ಲವಾಗಿದೆ.

ಇನ್ನು ಕಮ್ಯುನಿಸ್ಟ್ ಪಕ್ಷ ಮತ್ತು ರೈತ ಸಂಘ ಇವೆರಡೂ ಇಡೀ ಕ್ಷೇತ್ರದಾದ್ಯಂತ ಎಲ್ಲಾ ಸ್ತರಗಳ ಜನರಲ್ಲೂ ಪ್ರಭಾವವನ್ನು ಹೊಂದಿಲ್ಲ. ರೈತ ಸಂಘ ಎಲ್ಲಾ ಕಡೆ ಪ್ರಚಾರದಲ್ಲಿದೆಯಾದರೂ ಚುನಾವಣೆ ಗೆಲ್ಲುವಷ್ಟು ಮತ ಪಡೆಯಬಲ್ಲ ಸಾಮರ್ಥ್ಯ ಅದಕ್ಕೆ ಇನ್ನೂ ಇಲ್ಲ. ಕಮ್ಯುನಿಸ್ಟ್ ಪಕ್ಷವೂ ಎಲ್ಲಾ ಜನರಿಗೂ ಪರಿಚಿತವಿದೆ–ಆದರೆ ಅದು ಕಮ್ಯುನಿಸಂ ವಿರುದ್ಧದ ಪ್ರಚಾರದಿಂದ ಹಾಗೂ ಕಮ್ಯುನಿಸ್ಟರ ಹಲವು ತಪ್ಪುಗಳ ಗುರುತಿನಿಂದ ಹೊರತು ಕಮ್ಯುನಿಸಂ ಎಂದರೆ ಏನು ಎಂಬ ಸರಿಯಾದ ತಿಳುವಳಿಕೆಯಿಂದಲ್ಲ.

ಕಮ್ಯುನಿಸ್ಟ್ ಪಕ್ಷ ಸಾಮಾನ್ಯವಾಗಿ ಅವಲಂಬಿಸಬಹುದಾದ ಕಾರ್ಮಿಕ ವರ್ಗ ಇಲ್ಲಿನ 6,77,642 ಮತದಾರರ ಪೈಕಿ ಕೇವಲ 80 ಸಾವಿರದಷ್ಟಿದ್ದು, ಅದರಲ್ಲೂ ಒಂದು ದೊಡ್ಡ ಭಾಗ ಕಾಂಗ್ರೆನ 'ಇಂಟಕ್' ಕಾರ್ಮಿಕ ಸಂಘಟನೆ ಮತ್ತು ಇತರ ಹಲವು ಸಮಯ ಸಾಧಕರ ನೇತೃತ್ವದಲ್ಲಿದೆ.

ಇತ್ತ ಜನತಾ ಪಕ್ಷ ಸಿಪಿಐಯನ್ನು ತಾತ್ವಿಕ ದೃಷ್ಟಿಯಿಂದ ಬೆಂಬಲಿಸಿದ್ದರೂ ಆ ಪಕ್ಷದ ಎಲ್ಲರೂ ಸಿಪಿಐ ಬಗ್ಗೆ ಪ್ರೀತಿ ಹೊಂ

(4 ನೇ ಪುಟಕ್ಕೆ)

ಶೃಂಗೇರಿ ಕಾಂಗ್ರೆ ಒಳಗೆ....

ಬೇಗಾನೆ ರಾಮಯ್ಯನವರ ಸೋಲಿನ ನಂತರ ಈ ವರೆಗೂ(ಅಥವಾ ಮುಂಚೆ ಸಹ) ಅಷ್ಟಾಗಿ ಗಮನಿಸಲ್ಪಡದೆ ಯುವಕರ ಭಿನ್ನ ಮತೀಯ ಗುಂಪಿಗೆ ಸೇರಿ ಸನೆಗುದಿಗೆ ಬಿದ್ದಿದ್ದ ಕಾಂಗ್ರೆ ಯುವ ಶಕ್ತಿ ತಟ್ಟನೆ ಎಚ್ಚೆತ್ತು ಚೇತನ ಪಡೆದು, ಚುನಾವಣಾ ವ್ಯವಹಾರಗಳಲ್ಲಿ ತಮ್ಮ ನಾಯಕತ್ವವೇ ಮೇಲಾಗುವುದೆಂದು ಖಾತ್ರಿ ಪಡಿಸಿಕೊಂಡು ಚಟುವಟಿಕೆಗೆ ತೊಡಗಿದೆ. ಕೆಲವೇ ದಿನ ಹಿಂದೆ 'ನಿಮ್ಮದು ಯಾವ ಪಕ್ಷ, ಏನು ಗದ್ದುಗೆ?' ಎಂದರೆ "ಗೊತ್ತಿಲ್ಲ, ನಾವೆಲ್ಲ ಲೆಕ್ಕಕ್ಕಿಲ್ಲದ ಜನ" ಎನ್ನುತ್ತಿದ್ದ ಕೃಷ್ಣಪ್ಪಗೌಡ ತಮ್ಮ ಹಳೆಯ ಸ್ನೇಹಿತೆಯಾದ ತಾರಾದೇವಿಯ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಹಾಗೂ ಪುಟ್ಟೇಗೌಡ, ರಾಮಯ್ಯ ಅವರ ಗುಂಪಿಗೆ ಸ್ವಲ್ಪ ಸೋಲು ಹಿಡಿದಂತೆ ಕಾಣುತ್ತದೆ.

ತಾರಾದೇವಿಯ ಆಯ್ಕೆಯ ನಂತರ ಜನತಾ ಪಕ್ಷದೊಂದಿಗೆ ಚಿಕ್ಕನ ಹೆಜ್ಜೆ ಇಡುತ್ತ ಬಂದ ಕೆಲವರು ಈಗ ಕಾಂಗ್ರೆ ಒಳಗೆ ಗಟ್ಟಿ ಮಾಡಿಕೊಂಡಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆ ಬಹುಮತ ಪಡೆದು ರಾಜ್ಯದ ಜನತಾ ಸರ್ಕಾರ ಉರುಳಿ ಬೀಳುವುದೆಂದು ಗಟ್ಟಿಯಾಗಿ ನಂಬಿ ಯುವ ಶಕ್ತಿ ಈಗ ಬಿರುಸಿನಿಂದ ಓಡಾಡುತ್ತಿದೆ. ಅಲ್ಲದೆ ಗುಂಪು ಗುಂಪಾಗಿ ಮಾತುಕತೆ ಪ್ರಾರಂಭಿಸಿದ್ದಾರೆ.

ಭಿನ್ನ ಮತೀಯ ಗುಂಪು ಮಾತ್ರ ಪಕ್ಷದ ಒಳಗಿನ ಉರಿಯಿಂದ ಸಂಕಟ ಪಡುತ್ತಿದ್ದಾರೆ.

—ಕಲ್ಕುಳಿ ವಿಠಲ ಹೆಗ್ಡೆ

ಓದುಗರ ಪತ್ರಗಳು

"ನಾವು ಏನುಮಾಡಬೇಕೆಂದು ಯೋಚಿಸಲು ನಮಗೆ ಬರುತ್ತದೆ, ಚಿಂತಿಸಬೇಡಿ"

ಮಾನ್ಯರೆ,

ಬಸರೀಕಟ್ಟೆ ಬಳಿಯ ಬರ್ಕನಘಟ್ಟದಲ್ಲಿ ಸಿಪಿಐ ನೇತೃತ್ವದ ರೈತ ಸಂಘ ಸ್ಥಾಪನೆಯ ಬಗ್ಗೆ ಈಚಿಗೆ ಪತ್ರಿಕೆಗಳಲ್ಲಿ ಬಂದ ಹೇಳಿಕೆಗಳ ಕುರಿತು ಸ್ಪಷ್ಟೀಕರಣ.

ನಾವುಗಳು ಸೆ. 9 ರಂದು ಸಭೆ ನಡೆಸಿ ಸಿಪಿಐ ನೇತೃತ್ವದ ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರಿದ್ದು ಸತ್ಯ. ಆ ಸಂಘದಲ್ಲೇ ಮುಂದುವರಿಯುತ್ತಿದ್ದೇವೆ. ವಿಸರ್ಜಿತ ತಾ. ಅ. ಮಂಡಳಿಯ ಸದಸ್ಯ ಬೆಳ್ಳಯ್ಯ ಸಂಘದ ಸಂಚಾಲಕರಾಗಿರುವುದೂ ನಿಜ. ಅವರ ಮತ್ತು ಚೆನ್ನಯ್ಯನವರ ನಾಯಕತ್ವದಲ್ಲಿ, ಉಳಿದೆಲ್ಲ ಊರಿನ ಹಿತೈಷಿಗಳ ಜೊತೆ ಸೇರಿ ನಾವು ಊರಿನ ಏಳ್ಗೆಗೆ ಶ್ರಮಿಸಲು ನಿರ್ಧರಿಸಿದ್ದೇವೆ.

ನಮ್ಮ ಊರಿನ ಹಲವು ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ಒತ್ತಾಯಿಸಿದ್ದೂ ನಿಜ ಹಾಗೂ ಅನಿವಾರ್ಯ. ಅದೇ ವೇಳೆ, ಶಾಸಕರು ನಮ್ಮ ಗ್ರಾಮದ ಬಗ್ಗೆ ಕಾಳಜಿ ವಹಿಸಿದ್ದಾರೆಂಬ ಹೇಳಿಕೆಯನ್ನು ನಾವೆಂದೂ ನಿರಾಕರಿಸಿಲ್ಲ. ಹಾಗೆಂದು ನಾವು ಕಿಸಾನ್ ಸಭಾಕ್ಕೆ ಸೇರಬಾರದೆಂಬುದೂ ಬಾಲಿಶ.

ಯಾರೇ ಆಗಲಿ, ನಮ್ಮ ಊರಿಗಾಗಿ ದುಡಿದರೆ ಅದಕ್ಕೆ ನಮ್ಮ ಅಭಿನಂದನೆ. ಹಾಗೆಯೇ, ಪಾಣೆ ಕೊಡಿಸುತ್ತೇನೆಂದು ನಮ್ಮಲ್ಲಿ ಕೆಲವರಿಂದ ಸಹಿ ತೆಗೆದುಕೊಂಡು ಹೋಗಿ ಆ ಕೆಲಸ ಮಾಡಿಸಿಕೊಡದೆ, ನಮ್ಮ ಸಂಘದ ವಿರುದ್ಧ ಹೇಳಿಕೆ ನೀಡಿದ ಸ್ವಯಂಘೋಷಿತ ಮುಖಂಡರ ಬಗ್ಗೆಯೂ ನಾವು ಹೇಳುವುದಿದೆ.

ತಮ್ಮ ಪಕ್ಷ, ತಮ್ಮ ಸಂಘಟನೆಗಳನ್ನೇ ಸೇರಬೇಕೆಂದು ಯಾರೂ ನಮಗೆ ಹೇಳುವುದು ತರವಲ್ಲ. ನಾವು ಏನು ಮಾಡಬೇಕೆಂದು ಯೋಚಿಸಲು ನಮಗೆ ಬರುತ್ತದೆ. ಆ ಬಗ್ಗೆ ಬೇರೆಯವರಿಗೆ ಚಿಂತೆ ಅನಗತ್ಯ. ನಮ್ಮ ಸಂಘದ ವಿರುದ್ಧ ಸುಳ್ಳು ಹೇಳಿಕೆ ನೀಡಬೇಡಿ ಎಂದು ಮಾತ್ರ ಕೇಳುತ್ತೇವೆ.

—ಬರ್ಕನಘಟ್ಟ ಗ್ರಾಮಸ್ಥರು.

(12 ಮಂದಿಯ ಸಹಿ ಇದೆ.)

"ಸಮಸ್ಯೆ ತಿಳಿಯದೆ ಆರೋಪ ಸರಿಯಲ್ಲ"

ಮಾನ್ಯರೇ,

ದಿ. 2.12.84ರ 'ಮುಂಜಾವು'ನಲ್ಲಿ ಕಲ್ಲುಗುಡ್ಡೆಯ ಮಂಜನಬೆಳಲು ಜನತಾ ಮನೆಗಳ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪ್ರಕಟವಾದ ಕೆ.ವಿ ಗಣೇಶ್, ಬಿಳಲು ಕೊಪ್ಪ, ಇವರ ಪತ್ರಕ್ಕೆ ಇದು ಗ್ರಾಮಸ್ಥರ ಪ್ರತಿಕ್ರಿಯೆ.

ಈ ಗ್ರಾಮದ ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ನೆರೆ ಗ್ರಾಮದಲ್ಲಿದ್ದುಕೊಂಡು ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ. ಇಲ್ಲಿ ಒಂದು ಯುವಕ ರೈತ ಸಂಘವಿದ್ದು ಅದು ಸಕ್ರಿಯವಾಗಿ ಜನತೆಯ ಸಮಸ್ಯೆಯಲ್ಲಿ ಪಾಲ್ಗೊಳ್ಳುತ್ತಿದೆ. ಆದ್ದರಿಂದ ಈ ಗ್ರಾಮದ ಸಮಸ್ಯೆ ಗೊತ್ತಿಲ್ಲದ ನೆರೆ ಗ್ರಾಮಸ್ಥರು ಅನಗತ್ಯ ಶ್ರಮವನ್ನು ತೆಗೆದುಕೊಳ್ಳಬೇಕಾದ ಅಗತ್ಯ ಕಾಣುವುದಿಲ್ಲ.

ಕಲ್ಲುಗುಡ್ಡೆಯ ನೀರಿನ ಸಮಸ್ಯೆಯ ಬಗ್ಗೆ ಹೇಳಬೇಕಾದರೆ, 2 ವರ್ಷಗಳ ಹಿಂದೆ ತೆಗೆಸಿರುವ ತೆರೆದ ಬಾವಿಯಲ್ಲಿ ವರ್ಷ ಪೂರ್ತಿ ನೀರಿದ್ದು ಅದನ್ನು ಪಕ್ಕದಲ್ಲೆ ಇರುವ ಮಾಧ್ಯಮಿಕ ಶಾಲೆಗೆ ಹಾಗೂ ಜನತಾ ಮನೆಗಳಿಗೆ ಅನುಕೂಲವಾಗಲೆಂದು ಸರಿಯಾದ ಸ್ಥಳದಲ್ಲಿಯೇ ತೋಡಲಾಗಿದೆ. ಇದರಿಂದ ಸ್ಥಳೀಯರು ನೀರೆತ್ತುತ್ತಿದ್ದಾರೆ. ಹಾಗೂ 2-1/2 ವರ್ಷಗಳ ಹಿಂದೆ ತೆಗೆಸಲಾದ ಒಂದು ಕೊಳವೆ ಬಾವಿ ಮಾತ್ರ ಯಾಕೋ ಅನುಪಯುಕ್ತವಾಗಿದೆ. ಕಳೆದ ತಿಂಗಳು ಜನತಾ ಮನೆಗಳ ಮಧ್ಯದಲ್ಲಿಯೇ ಇನ್ನೊಂದು ಕೊಳವೆ ಬಾವಿಯನ್ನು ತೆಗೆಸಿದ್ದು ಸದ್ಯದಲ್ಲಿಯೇ ಅದಕ್ಕೆ ಹಿಡಿಪನ್ನು ಹಾಕ… ರವಸೆ ದೊರೆತಿದೆ. ಹೊಸ ಹೊಸ ಯೆ… ಹಾಕಿ ಐದೋ ಐವತ್ತೋ ಸಾವಿರ … ಮಾಡುವುದಕ್ಕಿಂತ ಇದ್ದದ್ದನ್ನೇ ಸರಿ… ಬಹುದು.

ಗ್ರಾಮಸ್ಥರು, ಕಲ್ಲುಗುಡ್ಡೆ …

ತೋಟಕ್ಕೆ ಅಗತೆ ಅಗತ್ಯ… ಎಂದು ವಿಜ್ಞಾನಿ ಹೇಳಿದ…

ಮಾನ್ಯರೆ,

ತಮ್ಮ ೧೮–೧೧–೮೪ ರ ಸಂಚಿಕೆ… 'ಅಡಿಕೆ ತೋಟಕ್ಕೆ ಅಗತೆ ಅತಿ ಅ… ಎಂದು ಕೃಷಿ ಇಲಾಖೆಯವರೊಬ್ಬರು… ಳಿದ್ದಾರೆ. ಆದರೆ ಶ್ರಿಂಗೇರಿಯಲ್ಲಿ ನಡೆದ… ಕೆ ಬೆಳೆ ವಿಚಾರ ಸಂಕಿರಣದಲ್ಲಿ ಅಂತ… ಷ್ಟ್ರೀಯ ಮಟ್ಟದ ಖ್ಯಾತ ವಿಜ್ಞಾನಿ ಹ… ವಿಟ್ಲದ 'ಕೇಂದ್ರ ತೋಟಗಾರಿಕೆ ಬೆಳೆ… ಶೋಧನಾ ಕೇಂದ್ರದ ನಿರ್ದೇಶಕರಾದ… ಶ್ಯಾಮ ಭಟ್ಟರು ಹೀಗೆ ಹೇಳಿದ್ದರು–"… ಯ ಮುಖ್ಯ ಉದ್ದೇಶ ಕಳೆಯನ್ನು … ಸುವುದು ಮಾತ್ರ. ಆದರೆ ಹೆಚ್ಚಾಗಿ… ಬೀಳುವ ಹಾಗೂ ಇಳಿಜಾರಿನ ಪ್ರದೇ… ಮಲೆನಾಡಿನಲ್ಲಿ ಅಗತೆ ಮಾಡಿದರೆ ಮ… ಪೂರಾ ತೊಳೆದು ಹೋಗುವ ಸಾಧ್ಯತೆ… ಅದರಲ್ಲೂ ತೀರಾ ಇಳಿಜಾರಾದ ಪ್ರ… ಲ್ಲಂತೂ ಯಾರು ಏನೇ ಹೇಳಲಿ, … ಹೇಳುತ್ತೇನೆ– ಅಗತೆ ಖಂಡಿತಾ … ಬೇಡ".

ಆದ್ದರಿಂದ ಅಗತೆ ಅತೀ ಅಗತ್ಯ ಎ… ಮಾತಲ್ಲಿ ಹುರುಳಿಲ್ಲ.

–ಶಿವಶಂಕರ್, ಸಿ…

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ–ಹೊಸ ಲೈನ್‌ಗಳ ಕೆಲಸ ವಿಳಂಬ:

ವಿದ್ಯುಚ್ಛಕ್ತಿ ಸಂಪರ್ಕ ಬೇಕಾದ ರೈತರಿಗೆ ಒಂದು ಸಲಹೆ

ನೀರಿಲ್ಲದೆ ಒಣಗುವ ತಮ್ಮ ಜಮೀನಿಗೆ ನೀರು ಹಾಯಿಸಲು ಬೇರೆ ಮಾರ್ಗವಿಲ್ಲದ ರೈತರು ಸಾಲ-ಸೋಲ ಮಾಡಿ ಪಂಪ್‌ಸೆಟ್ ತಂದು, ಸಾಲದ ವಸೂಲಾತಿ ಶುರುವಾದರೂ ಪಂಪ್‌ಸೆಟ್ಟಿಗೆ ಬೇಕಾದ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಇಲಾಖೆ ಕೊಡದೆ, ಇತ್ತ ಪೈರೂ ಒಣಗಿಸಿಕೊಂಡು ಅತ್ತ ಸಾಲದ ಕಂತು–ಬಡ್ಡಿಯನ್ನೂ ಕಟ್ಟಬೇಕಾಗುವ ರೈತರ ಅನೇಕ ದೂರುಗಳು ಬರುತ್ತಿರುತ್ತವೆ.

ಈ ಬಗ್ಗೆ 'ಮುಂಜಾವು' ಕೆ. ವಿ. ಮಂಡಳಿಯ ಚಿಕ್ಕಮಗಳೂರು ಎಕ್ಸಿಕ್ಯುಟಿವ್ ಇಂಜಿನಿಯರ್ ಗಿರಿಯಪ್ಪ ಅವರ ಗಮನ ಸೆಳೆದಾಗ, ಅವರು ಇಲಾಖೆಯಲ್ಲಿರುವ ತೀವ್ರ ಸಿಬ್ಬಂದಿಯ ಕೊರತೆಯನ್ನು ವಿವರಿಸಿ, ರೈತರ ಸಮಸ್ಯೆಗೆ ಒಂದು ಪರಿಹಾರ ಮಾರ್ಗವನ್ನೂ ಸೂಚಿಸಿದ್ದಾರೆ. ಅದರ ವಿವರ ಇಲ್ಲಿದೆ.

ವಿದ್ಯುತ್ ಸಂಪರ್ಕ ನೀಡುವಲ್ಲಿ ವಿಳಂಬಕ್ಕೆ ಮುಖ್ಯವಾದ ಕಾರಣವೆಂದರೆ ಕಂಬ ನೆಟ್ಟು ಲೈನ್ ಎಳೆಯುವುದಕ್ಕೆ ಸಿಬ್ಬಂದಿಯಿಲ್ಲದಿರುವುದು. ಆದ್ದರಿಂದ ಈ ಕೆಲಸಕ್ಕೆ ರೈತರು ಮುಂದಾದರೆ ಇಲಾಖೆ ಅದರ ಪೂರ್ತಿ ಖರ್ಚನ್ನು ರೈತರಿಗೆ ಕೊಡುತ್ತದೆ.

ರೈತರು ಹೀಗೆ ಮಾಡಬೇಕು: ತಮ್ಮ ಸಮೀಪದ ವಿದ್ಯುತ್ ಲೈನಿನಿಂದ ತಮಗೆ ಸಂಪರ್ಕ ಬೇಕಾಗಿರುವ ಜಾಗದವರೆಗೆ ಎಷ್ಟು ದೂರ ಆಗುತ್ತದೆಂಬುದನ್ನು ನಮೂದಿಸಿ, ಕಂಬ-ಲೈನಿನ ಕೆಲಸ ತಾವೇ ಮಾಡಿಸಿಕೊಳ್ಳುವುದಾಗಿ ಉಪ ವಿಭಾಗದ ಇಂಜಿನಿಯರ್‌ಗೆ ಅರ್ಜಿ ಕೊಡಬೇಕು. ಇಲಾಖೆ ಅಗತ್ಯವಿದ್ದಷ್ಟು ಕಂಬ ಮತ್ತಿತರ ಸಲಕರಣೆಗಳನ್ನು ಒದಗಿಸುತ್ತದೆ. ಅದರ ಸಾಗಣೆಯನ್ನೂ ರೈತರೇ ಏರ್ಪಡಿಸಿಕೊಂಡರೆ ಅದಕ್ಕೂ ಇಲಾಖೆ ಪೂರ್ಣ ಖರ್ಚು ಕೊಡುತ್ತದೆ. ಇಲ್ಲವಾದರೆ ಇಲಾಖೆ ಸಾಗಣೆ ಮಾಡಿ ಕೊಡುತ್ತದೆ.

ನಂತರ ಕಂಬ ನಿಲ್ಲಿಸಿ, ಲೈನ್ ಎಳೆಯುವ ಕೆಲಸದ ಮಾರ್ಗದರ್ಶನಕ್ಕೆ ಇಲಾಖೆಯ ಒಬ್ಬ ನೌಕರ ಹಾಜರಿರುತ್ತಾರೆ. ಕೆಲಸ ಪೂರ್ಣವಾದ ಮೇಲೆ ಸಂಪರ್ಕ ನೀಡಲಾಗುತ್ತದೆ. ಅನಂತರ ಒಟ್ಟು ಖರ್ಚಿನ ಬಿಲ್ ಸಲ್ಲಿಸಿದರೆ ಇಲಾಖೆ ಪಾವತಿ ಮಾಡುತ್ತದೆ.

ಕೆಲಸವನ್ನು ತಾವೇ ಮಾಡಿಸಲಾಗದ ರೈತರು ಬೇರೆಯವರಿಗೆ ಕಂಟ್ರಾಕ್ಟ್ ಕೊಡಬಹುದು. ಬಿಲ್ ಪಾವತಿಯಲ್ಲಿ ಅನಗತ್ಯ ವಿಳಂಬಕ್ಕಾಗಲಿ, ಲಂಚಕ್ಕಾಗಲಿ ಅವಕಾಶ ಕೊಡುವುದಿಲ್ಲವೆಂದು ಗಿರಿಯಪ್ಪ 'ಮುಂಜಾವು'ಗೆ ಭರವಸೆ ನೀಡಿ, ಚಿಕ್ಕಮಗಳೂರು, ಕಡೂರು ಮುಂತಾದ ತಾ|| ಗಳಲ್ಲಿ

(4 ನೇ ಪುಟಕ್ಕೆ)

ಕೊಪ್ಪ ಬಸ್ ಸ್ಟ್ಯಾಂಡ್ ಹೋಟೆಲ್ ಹಗರಣದ ಮೊಕದ್ದಮೆ ವಾಪಸು

ಕೊಪ್ಪ: ಈ ವರ್ಷದ ಆರಂಭದಲ್ಲಿ ಇಲ್ಲಿನ ಬಸ್ ಸ್ಟ್ಯಾಂಡ್ ಹೋಟೆಲಿನ ಆಗಿನ ಗುತ್ತಿಗೆದಾರರು ಪುರಸಭೆ ಮುಖ್ಯಾಧಿಕಾರಿಗಳ, ಅಧ್ಯಕ್ಷರ ಮತ್ತು ಕೌನ್ಸಿಲರ್‌ಗಳ ಮೇಲೆ, ಅವರುಗಳು ತಮ್ಮ ಹೋಟೆಲ್ ಬೀಗ ಒಡೆದರೆಂದು ನೀಡಿದ್ದ ದೂರಿನನ್ವಯ ಇಲ್ಲಿನ ಪೋಲೀಸರು ಹೂಡಿದ್ದ ಕ್ರಿಮಿನಲ್ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿ, ಆ ಬಗ್ಗೆ ಆದೇಶ ಹೊರಡಿಸಿರುವುದಾಗಿ ತಿಳಿದುಬಂದಿದೆ.

"ಆಶಾಕಿರಣ"

(2ನೇ ಪುಟದಿಂದ)

ದರಿಯರಲ್ಲಿ ಹಿರಿಯವರು–ಈ ಕ್ರ… ಇಷ್ಟು ಜನ ಮಾತ್ರ ಪರಿಹಾರಕ್ಕೆ… ಹಾಕಬಹುದು.

ಹೆಚ್ಚಿನ ವಿವರಗಳನ್ನು ಸಂಬಂ… ಗ್ರಾಮಲೆಕ್ಕಿಗರು ಅಥವಾ ಪುರಸಭೆ… ಧಿಕಾರಿಗಳು ಅಥವಾ ಕ್ಷೇತ್ರಾಭಿವೃದ್ಧಿ… ಕಾರಿಗಳಿಂದ ಪಡೆಯಬಹುದು.

ಹುಲಿ ಕಾಟ: ಪರಿಹಾರ ನೀಡಿಕೆ ಸರ…

(2ನೇ ಪುಟದಿಂದ)

ದಲ್ಲಿ, ಸಾವಿನ ಕಾರಣ ಹುಲಿಯೇ ಎಂದು ಸೂಚಿಸುವ ಇತರ ಸ್ಪಷ್ಟ ಕುರುಹುಗಳಿದ್ದಲ್ಲಿ ೪೮ ಗಂಟೆಯ ನಂತರವೂ ಮಹಜರು ನಡೆಸಿ ಪರಿಹಾರ ಕೊಡುವುದು ಅಗತ್ಯ.

ಈಗೀಗ ಹುಲಿಗಳು ಒಮ್ಮೆಗೇ ೨-೩ ಎಮ್ಮೆ-ದನಗಳನ್ನು, ಒಂದೊಂದು ಜೊತೆ ಗಾಡಿ ಎತ್ತುಗಳನ್ನು-ಹೀಗೆಲ್ಲ ಹಿಡಿದುಹಾಕುತ್ತಿವೆ. ಇಂಥ ಸಂದರ್ಭದಲ್ಲಿ ಬರೀ ೫೦೦ ರೂ. ಪರಿಹಾರ ಯಾವ ಲೆಕ್ಕವೂ ಅಲ್ಲ. ಆದ್ದರಿಂದ, ಕನಿಷ್ಠ ವೃತ್ತ ಅರಣ್ಯ ಸಂರಕ್ಷಕರಾದರೂ ಒಂದು ಜಾನುವಾರಿಗೆ ಕನಿಷ್ಠ ೧೫೦೦ ರೂ. ವರೆಗೂ ಪರಿಹಾರ ಕೊಡುವಂತಿರಬೇಕು, ಹಾಗೂ ಈ ಪರಿಹಾರದ ಲೆಕ್ಕಾಚಾರ ಒಂದು ಜಾನುವಾರಿಗೆ ಎಂದಿರಬೇಕು ಹೊರತು ಒಬ್ಬ ವ್ಯಕ್ತಿಗೆ ಒಂದು ಸಲಕ್ಕೆ ಎಂದಿರಬಾರದು. ಇದು ಸ್ಪಷ್ಟವಿರಬೇಕು.

ಫಾರೆಸ್ಟರನ್ನು ಕರೆತಂದು ಮಹಜರು ಮಾಡಿಸುವುದೂ ಕಷ್ಟದ, ಪರದಾಟದ ಕೆಲಸವಾಗುತ್ತಿದ್ದು, ಎಷ್ಟೋ ರೈತರು (ಮುಖ್ಯವಾಗಿ ಸಿರಿಮನೆ ಕಡೆಯವರು) ಪರಿ… ಅರ್ಜಿ ಹಾಕುವುದನ್ನೇ ನಿಲ್ಲಿಸಿದ್ದಾ… ವ್ಯರ್ಥ ತಿರುಗಾಟ ತಪ್ಪಿಸಿ, ಒಮ್ಮೆ… ಕೊಡಲಿಕ್ಕೆ, ಇನ್ನೊಮ್ಮೆ ಪರಿಹಾರ… ಪಡೆಯಲಿಕ್ಕೆ–ಹೀಗೆ ಎರಡೇ ತಿರುಗ… ಳಗೆ ಪರಿಹಾರ ಸಿಗುವಂತೆ ಏರ್ಪಡಿಸ… ರಿಕಾರ್ಡುಗಳನ್ನು ಅಡ್ಡಾದಿಡ್ಡಿ ತಿರ… ಯಾರಿಸುವುದು ತಪ್ಪಬೇಕು; ಪ… ಹಣದ ಚೆಕ್ಕನ್ನು ಹತ್ತಿರದ ಬ್ಯಾ… ಪಾವತಿಯಾಗುವಂತೆ ಕೊಡಬೇಕು.

ಕೊನೆಯದಾಗಿ, ರೈತರ ಬ… **ವನ್ನು ಮತ್ತೊಮ್ಮೆ ಧ್ವನಿಸು… ರೆ– ಇವುಗಳಲ್ಲಿ ಆದಷ್ಟು ಹುಲಿ… ಬೋನಿನಲ್ಲಿ ಹಿಡಿದು ಅಭಯಾ… ಸಾಗಿಸಬೇಕು.**

ಶಾಸಕರು ಮತ್ತು ಅಧಿ… ಈ ಬಗ್ಗೆಯೂ ಗಮನ ಹರಿಸ…

ಚಂದಾ ಹಣ ಕ…
ಸ ಹ ಕ ರಿ ಸಿ…

ಓದುಗರ ಪತ್ರಗಳು

"ನಾವು ಏನುಮಾಡಬೇಕೆಂದು ಯೋಚಿಸಲು ನಮಗೆ ಬರುತ್ತದೆ, ಚಿಂತಿಸಬೇಡಿ"

ಮಾನ್ಯರೆ,

ಬಸರೀಕಟ್ಟೆ ಬಳಿಯ ಬರ್ಕನಘಟ್ಟದಲ್ಲಿ ಸಿಪಿಐ ನೇತೃತ್ವದ ರೈತ ಸಂಘ ಸ್ಥಾಪನೆಯ ಬಗ್ಗೆ ಈಚೆಗೆ ಪತ್ರಿಕೆಗಳಲ್ಲಿ ಬಂದ ಹೇಳಿಕೆಗಳ ಕುರಿತು ಸ್ಪಷ್ಟೀಕರಣ.

ನಾವುಗಳು ಸೆ. 9 ರಂದು ಸಭೆ ನಡೆಸಿ ಸಿಪಿಐ ನೇತೃತ್ವದ ಅಖಿಲ ಭಾರತ ಕಿಸಾನ್ ಸಭಾಕ್ಕೆ ಸೇರಿದ್ದು ಸತ್ಯ. ಆ ಸಂಘದಲ್ಲೇ ಮುಂದುವರಿಯುತ್ತಿದ್ದೇವೆ. ವಿಸರ್ಜಿತ ತಾ. ಅ. ಮಂಡಳಿಯ ಸದಸ್ಯ ಬೆಳ್ಳಯ್ಯ ಸಂಘದ ಸಂಚಾಲಕರಾಗಿರುವುದೂ ನಿಜ. ಅವರ ಮತ್ತು ಚೆನ್ನಯ್ಯನವರ ನಾಯಕತ್ವದಲ್ಲಿ, ಉಳಿದೆಲ್ಲ ಊರಿನ ಹಿತೈಷಿಗಳ ಜೊತೆ ಸೇರಿ ನಾವು ಊರಿನ ಏಳ್ಗೆಗೆ ಶ್ರಮಿಸಲು ನಿರ್ಧರಿಸಿದ್ದೇವೆ.

ನಮ್ಮ ಊರಿನ ಹಲವು ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿಹಾರಕ್ಕಾಗಿ ಒತ್ತಾಯಿಸಿದ್ದೂ ನಿಜ ಹಾಗೂ ಅನಿವಾರ್ಯ. ಅದೇ ವೇಳೆ, ಶಾಸಕರು ನಮ್ಮ ಗ್ರಾಮದ ಬಗ್ಗೆ ಕಾಳಜಿ ವಹಿಸಿದ್ದಾರೆಂಬ ಹೇಳಿಕೆಯನ್ನು ನಾವೆಂದೂ ನಿರಾಕರಿಸಿಲ್ಲ. ಹಾಗೆಂದು ನಾವು ಕಿಸಾನ್ ಸಭಾಕ್ಕೆ ಸೇರಬಾರದೆಂಬುದೂ ಬಾಲಿಶ.

ಯಾರೇ ಆಗಲಿ, ನಮ್ಮ ಊರಿಗಾಗಿ ದುಡಿದರೆ ಅದಕ್ಕೆ ನಮ್ಮ ಅಭಿನಂದನೆ. ಹಾಗೆಯೇ, ಪಾಣೆ ಕೊಡಿಸುತ್ತೇನೆಂದು ನಮ್ಮಲ್ಲಿ ಕೆಲವರಿಂದ ಸಹಿ ತೆಗೆದುಕೊಂಡು ಹೋಗಿ ಆ ಕೆಲಸ ಮಾಡಿಸಿಕೊಡದೆ, ನಮ್ಮ ಸಂಘದ ವಿರುದ್ಧ ಹೇಳಿಕೆ ನೀಡಿದ ಸ್ವಯಂ ಘೋಷಿತ ಮುಖಂಡರ ಬಗ್ಗೆಯೂ ನಾವು ಹೇಳುವುದಿದೆ.

ತಮ್ಮ ಪಕ್ಷ, ತಮ್ಮ ಸಂಘಟನೆಗಳನ್ನೇ ಸೇರಬೇಕೆಂದು ಯಾರೂ ನಮಗೆ ಹೇಳುವುದು ತರವಲ್ಲ. ನಾವು ಏನು ಮಾಡಬೇಕೆಂದು ಯೋಚಿಸಲು ನಮಗೆ ಬರುತ್ತದೆ. ಆ ಬಗ್ಗೆ ಬೇರೆಯವರಿಗೆ ಚಿಂತೆ ಅನಗತ್ಯ. ನಮ್ಮ ಸಂಘದ ವಿರುದ್ಧ ಸುಳ್ಳು ಹೇಳಿಕೆ ನೀಡಬೇಡಿ ಎಂದು ಮಾತ್ರ ಕೇಳುತ್ತೇವೆ.

—ಬರ್ಕನಘಟ್ಟ ಗ್ರಾಮಸ್ಥರು.
(12 ಮಂದಿಯ ಸಹಿ ಇದೆ.)

"ಸಮಸ್ಯೆ ತಿಳಿಯದೆ ಆರೋಪ ಸರಿಯಲ್ಲ"

ಮಾನ್ಯರೇ,

ದಿ. 2.12.84ರ 'ಮುಂಜಾವು'ನಲ್ಲಿ ಕಲ್ಲುಗುಡ್ಡೆಯ ಮಂಜನಬೈಲು ಜನತಾ ಮನೆಗಳ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪ್ರಕಟವಾದ ಕೆ.ವಿ. ಗಣೇಶ್, ಬಿಳಲು ಕೊಪ್ಪ, ಇವರ ಪತ್ರಕ್ಕೆ ಇದು ಗ್ರಾಮಸ್ಥರ ಪ್ರತಿಕ್ರಿಯೆ.

ಈ ಗ್ರಾಮದ ಸಮಸ್ಯೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ನೆರೆ ಗ್ರಾಮದಲ್ಲಿದ್ದುಕೊಂಡು **ಈ** ರೀತಿ ಆಪಾದನೆ ಮಾಡುವುದು ಸರಿಯಲ್ಲ. ಇಲ್ಲಿ ಒಂದು ಯುವಕ ರೈತ ಸಂಘವಿದ್ದು ಅದು ಸಕ್ರಿಯವಾಗಿ ಜನತೆಯ ಸಮಸ್ಯೆಯಲ್ಲಿ ಪಾಲ್ಗೊಳ್ಳುತ್ತಿದೆ. ಆದ್ದರಿಂದ **ಈ** ಗ್ರಾಮದ ಸಮಸ್ಯೆ ಗೊತ್ತಿಲ್ಲದ ನೆರೆ ಗ್ರಾಮಸ್ಥರು ಅನಗತ್ಯ ಶ್ರಮವನ್ನು ತೆಗೆದುಕೊಳ್ಳಬೇಕಾದ ಅಗತ್ಯ ಕಾಣುವುದಿಲ್ಲ.

ಕಲ್ಲುಗುಡ್ಡೆಯ ನೀರಿನ ಸಮಸ್ಯೆಯ ಬಗ್ಗೆ ಹೇಳಬೇಕಾದರೆ, 2 ವರ್ಷಗಳ ಹಿಂದೆ ತೆಗೆಸಿರುವ ತೆರೆದ ಬಾವಿಯಲ್ಲಿ ವರ್ಷ ಪೂರ್ತಿ ನೀರಿದ್ದು **ಅದನ್ನು** ಪಕ್ಕದಲ್ಲೆ ಇರುವ ಮಾಧ್ಯಮಿಕ ಶಾಲೆಗೆ ಹಾಗೂ ಜನತಾ ಮನೆಗಳಿಗೆ **ಅನುಕೂಲವಾಗಲೆಂದು** ಸರಿಯಾದ ಸ್ಥಳದಲ್ಲಿಯೇ **ತೋಡಲಾಗಿದೆ**. ಇದರಿಂದ ಸ್ಥಳೀಯರು **ನೀರೆತ್ತುತ್ತಿದ್ದಾರೆ**. ಹಾಗೂ 2-1/2 ವರ್ಷಗಳ ಹಿಂದೆ ತೆಗೆಸಲಾದ ಒಂದು ಕೊಳವೆ ಬಾವಿ **ಮಾತ್ರ** ಯಾಕೋ ಅನುಪಯುಕ್ತವಾಗಿದೆ. ಕಳೆದ ತಿಂಗಳು ಜನತಾ ಮನೆಗಳ ಮಧ್ಯದಲ್ಲಿಯೇ ಇನ್ನೊಂದು ಕೊಳವೆ ಬಾವಿಯನ್ನು ತೆಗೆಸಿದ್ದು ಸದ್ಯದಲ್ಲಿಯೇ ಅದಕ್ಕೆ ಹಿಡಿಪನ್ನು ಹಾ[...] ರವಸೆ ದೊರೆತಿದೆ. ಹೊಸ ಹೊಸ ಯ[...] ಹಾಕಿ ಐದೋ ಐವತ್ತೋ ಸಾವಿರ [...] ಮಾಡುವುದಕ್ಕಿಂತ ಇದ್ದದ್ದನ್ನೇ ಸ[...] ಬಹುದು.

ಗ್ರಾಮಸ್ಥರು, ಕಲ್ಲುಗುಡ್ಡೆ

ತೋಟಕ್ಕೆ ಅಗತೆ ಅಗತ್ಯ[...] ಎಂದು ವಿಜ್ಞಾನಿ ಹೇಳಿ[...]

ಮಾನ್ಯರೆ,

ತಮ್ಮ ೧೮-೧೧-೮೪ ರ ಸಂಚಿಕೆ[...] 'ಅಡಿಕೆ ತೋಟಕ್ಕೆ ಅಗತೆ ಅತಿ ಅ[...] ಎಂದು ಕೃಷಿ ಇಲಾಖೆಯವರೊಬ್ಬರ[...] ಳಿದ್ದಾರೆ. ಆದರೆ ಶ್ರಿಂಗೇರಿಯಲ್ಲಿ ನಡೆದ[...] ಕೆ ಬೆಳೆ ವಿಚಾರ ಸಂಕಿರಣದಲ್ಲಿ ಅಂತ[...] ಷ್ಟ್ರೀಯ ಮಟ್ಟದ ಖ್ಯಾತ ವಿಜ್ಞಾನಿ ರ[...] ವಿಟ್ಲದ 'ಕೇಂದ್ರ ತೋಟಗಾರಿಕೆ ಬೆಳೆ[...] ಶೋಧನಾ ಕೇಂದ್ರದ ನಿರ್ದೇಶಕರಾದ[...] ಶ್ಯಾಮ ಭಟ್ಟರು ಹೀಗೆ ಹೇಳಿದ್ದರು—"[...] ಯ ಮುಖ್ಯ ಉದ್ದೇಶ ಕಳೆಯನ್ನು [...] ಸುವುದು ಮಾತ್ರ. ಆದರೆ ಹೆಚ್ಚಾಗಿ[...] ಬೀಳುವ ಹಾಗೂ ಇಳಿಜಾರಿನ ಪ್ರದೇ[...] ಮಲೆನಾಡಿನಲ್ಲಿ ಅಗತೆ ಮಾಡಿದರೆ [...] ಪೂರಾ ತೊಳೆದು ಹೋಗುವ ಸಾಧ್ಯತೆ[...] ಅದರಲ್ಲೂ ತೀರಾ ಇಳಿಜಾರಾದ ಪ್ರ[...] ಲ್ಲಂತೂ ಯಾರು ಏನೇ ಹೇಳಲಿ, [...] ಹೇಳುತ್ತೇನೆ– ಅಗತೆ ಖಂಡಿತಾ [...] ಬೇಡಿ".

ಆದ್ದರಿಂದ ಅಗತೆ ಅತೀ ಅಗತ್ಯ [...] ಮಾತಲ್ಲಿ ಹುರುಳಿಲ್ಲ.

-ಶಿವಶಂಕರ್, ಸಿ[...]

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ–ಹೊಸ ಲೈನ್‌ಗಳ ಕೆಲಸ ವಿಳಂಬ:

ವಿದ್ಯುಚ್ಛಕ್ತಿ ಸಂಪರ್ಕ ಬೇಕಾದ ರೈತರಿಗೆ ಒಂದು ಸಲಹೆ

ನೀರಿಲ್ಲದೆ ಒಣಗುವ ತಮ್ಮ ಜಮೀನಿಗೆ ನೀರು ಹಾಯಿಸಲು ಬೇರೆ ಮಾರ್ಗವಿಲ್ಲದ ರೈತರು ಸಾಲ-ಸೋಲ ಮಾಡಿ ಪಂಪ್‌ಸೆಟ್ ತಂದು, ಸಾಲದ ವಸೂಲಾತಿ ಶುರುವಾದರೂ ಪಂಪ್‌ಸೆಟ್ಟಿಗೆ ಬೇಕಾದ ವಿದ್ಯುತ್ ಸಂಪರ್ಕವನ್ನು ವಿದ್ಯುತ್ ಇಲಾಖೆ ಕೊಡದೆ, ಇತ್ತ ಪೈರೂ ಒಣಗಿಸಿಕೊಂಡು ಅತ್ತ ಸಾಲದ ಕಂತು–ಬಡ್ಡಿಯನ್ನೂ ಕಟ್ಟಬೇಕಾಗುವ ರೈತರ ಅನೇಕ ದೂರುಗಳು ಬರುತ್ತಿರುತ್ತವೆ.

ಈ ಬಗ್ಗೆ 'ಮುಂಜಾವು' ಕೆ. ವಿ. ಮಂಡಳಿಯ ಚಿಕ್ಕಮಗಳೂರು **ಎಕ್ಸಿಕ್ಯೂಟಿವ್** ಇಂಜಿನಿಯರ್ ಗಿರಿಯಪ್ಪ ಅವರ ಗಮನ ಸೆಳೆದಾಗ, ಅವರು ಇಲಾಖೆಯಲ್ಲಿರುವ ತೀವ್ರ ಸಿಬ್ಬಂದಿಯ ಕೊರತೆಯನ್ನು ವಿವರಿಸಿ, ರೈತರ ಸಮಸ್ಯೆಗೆ ಒಂದು ಪರಿಹಾರ ಮಾರ್ಗವನ್ನೂ ಸೂಚಿಸಿದ್ದಾರೆ. ಅದರ ವಿವರ ಇಲ್ಲಿದೆ.

ವಿದ್ಯುತ್ ಸಂಪರ್ಕ ನೀಡುವಲ್ಲಿ ವಿಳಂಬಕ್ಕೆ ಮುಖ್ಯವಾದ ಕಾರಣವೆಂದರೆ ಕಂಬ ನೆಟ್ಟು ಲೈನ್ ಎಳೆಯುವುದಕ್ಕೆ ಸಿಬ್ಬಂದಿಯಿಲ್ಲದಿರುವುದು. ಆದ್ದರಿಂದ **ಈ** ಕೆಲಸಕ್ಕೆ ರೈತರು ಮುಂದಾದರೆ ಇಲಾಖೆ ಅದರ ಪೂರ್ತಿ ಖರ್ಚನ್ನು ರೈತರಿಗೆ ಕೊಡುತ್ತದೆ.

ರೈತರು ಹೀಗೆ ಮಾಡಬೇಕು: ತಮ್ಮ ಸಮೀಪದ ವಿದ್ಯುತ್ ಲೈನಿನಿಂದ ತಮಗೆ ಸಂಪರ್ಕ ಬೇಕಾಗಿರುವ ಜಾಗದವರೆಗೆ ಎಷ್ಟು ದೂರ ಆಗುತ್ತದೆಂಬುದನ್ನು ನಮೂದಿಸಿ, ಕಂಬ-ಲೈನಿನ ಕೆಲಸ ತಾವೇ ಮಾಡಿಸಿಕೊಳ್ಳುವುದಾಗಿ ಉಪ ವಿಭಾಗದ ಇಂಜಿನಿಯರ್‌ಗೆ ಅರ್ಜಿ ಕೊಡಬೇಕು. ಇಲಾಖೆ ಅಗತ್ಯವಿದ್ದಷ್ಟು ಕಂಬ ಮತ್ತಿತರ ಸಲಕರಣೆಗಳನ್ನು ಒದಗಿಸುತ್ತದೆ. ಅದರ ಸಾಗಣೆಯನ್ನೂ ರೈತರೇ ಏರ್ಪಡಿಸಿಕೊಂಡರೆ ಅದಕ್ಕೂ ಇಲಾಖೆ ಪೂರ್ಣ ಖರ್ಚು ಕೊಡುತ್ತದೆ. ಇಲ್ಲವಾದರೆ ಇಲಾಖೆ ಸಾಗಣೆ ಮಾಡಿ ಕೊಡುತ್ತದೆ.

ನಂತರ ಕಂಬ ನಿಲ್ಲಿಸಿ, ಲೈನ್ ಎಳೆಯುವ ಕೆಲಸದ ಮಾರ್ಗದರ್ಶನಕ್ಕೆ ಇಲಾಖೆಯ ಒಬ್ಬ ನೌಕರ ಹಾಜರಿರುತ್ತಾರೆ. ಕೆಲಸ ಪೂರ್ಣವಾದ ಮೇಲೆ ಸಂಪರ್ಕ ನೀಡಲಾಗುತ್ತದೆ. ಆನಂತರ ಒಟ್ಟು ಖರ್ಚಿನ ಬಿಲ್ ಸಲ್ಲಿಸಿದರೆ ಇಲಾಖೆ ಪಾವತಿ ಮಾಡುತ್ತದೆ.

ಕೆಲಸವನ್ನು ತಾವೇ ಮಾಡಿಸಲಾಗದ ರೈತರು ಬೇರೆಯವರಿಗೆ ಕಂಟ್ರ್ಯಾಕ್ಟ್ ಕೂಡ ಕೊಡಬಹುದು. ಬಿಲ್ ಪಾವ್ತಿಯಲ್ಲಿ ಅನಗತ್ಯ ವಿಳಂಬಕ್ಕಾಗಲಿ, ಲಂಚಕ್ಕಾಗಲಿ ಅವಕಾಶ ಕೊಡುವುದಿಲ್ಲವೆಂದು ಗಿರಿಯಪ್ಪ 'ಮುಂಜಾವು'ಗೆ ಭರವಸೆ ನೀಡಿ, ಚಿಕ್ಕಮಗಳೂರು, ಕಡೂರು ಮುಂತಾದ ತಾ|| ಗಳಲ್ಲಿ

(4 ನೇ ಪುಟಕ್ಕೆ)

ಕೊಪ್ಪ ಬಸ್ ಸ್ಟ್ಯಾಂಡ್ ಹೋಟೆಲ್ ಹಗರಣದ ಮೊಕದ್ದಮೆ ವಾಪಸು

ಕೊಪ್ಪ: **ಈ** ವರ್ಷದ ಆರಂಭದಲ್ಲಿ ಇಲ್ಲಿನ ಬಸ್ ಸ್ಟ್ಯಾಂಡ್ ಹೋಟೆಲಿನ ಆಗಿನ ಗುತ್ತಿಗೆದಾರರು ಪುರಸಭೆ ಮುಖ್ಯಾಧಿಕಾರಿಗಳ, ಅಧ್ಯಕ್ಷರ ಮತ್ತು ಕೌನ್ಸಿಲರ್‌ಗಳ ಮೇಲೆ, ಅವರುಗಳು ತಮ್ಮ ಹೋಟೆಲ್ ಬೀಗ ಒಡೆದರೆಂದು ನೀಡಿದ್ದ ದೂರಿನನ್ವಯ ಇಲ್ಲಿನ ಪೋಲೀಸರು ಹೂಡಿದ್ದ ಕ್ರಿಮಿನಲ್ ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿ, ಆ ಬಗ್ಗೆ ಆದೇಶ ಹೊರಡಿಸಿರುವುದಾಗಿ ತಿಳಿದುಬಂದಿದೆ.

ಹುಲಿ ಕಾಟ: ಪರಿಹಾರ ನೀಡಿಕೆ ಸರ[...]

(2ನೇ ಪುಟದಿಂದ)

ದಲ್ಲಿ, ಸಾವಿನ ಕಾರಣ ಹುಲಿಯೇ ಎಂದು ಸೂಚಿಸುವ ಇತರ ಸ್ಪಷ್ಟ ಕುರುಹುಗಳಿದ್ದಲ್ಲಿ ೪೮ ಗಂಟೆಯ ನಂತರವೂ ಮಹಜರು ನಡೆಸಿ ಪರಿಹಾರ ಕೊಡುವುದು ಅಗತ್ಯ.

ಈಗೀಗ ಹುಲಿಗಳು **ಒಮ್ಮೆ**ಗೇ ೨-೩ ಎಮ್ಮೆ-ದನಗಳನ್ನು, **ಒಂದೊಂದು** ಜೊತೆ ಗಾಡಿ ಎತ್ತುಗಳನ್ನು-ಹೀಗೆಲ್ಲ ಹಿಡಿದುಹಾಕುತ್ತಿವೆ. ಇಂಥ ಸಂದರ್ಭದಲ್ಲಿ ಬರೀ ೫೦೦ ರೂ. ಪರಿಹಾರ ಯಾವ **ಲೆಕ್ಕವೂ** ಅಲ್ಲ. ಆದ್ದರಿಂದ, ಕನಿಷ್ಠ ವೃತ್ತ **ಅರಣ್ಯ** ಸಂರಕ್ಷಕರಾದರೂ ಒಂದು ಜಾನುವಾರಿಗೆ ಕೊನೇ ಪಕ್ಷ ೧೫೦೦ ರೂ. ವರೆಗೂ ಪರಿಹಾರ ಕೊಡುವಂತಿರಬೇಕು, ಹಾಗೂ **ಈ** ಪರಿಹಾರದ ಲೆಕ್ಕಾಚಾರ **ಒಂದು ಜಾನುವಾರಿಗೆ** ಎಂದಿರಬೇಕು ಹೊರತು **ಒಬ್ಬ ವ್ಯಕ್ತಿಗೆ ಒಂದು ಸಲಕ್ಕೆ** ಎಂದಿರಬಾರದು. ಇದು ಸ್ಪಷ್ಟವಿರಬೇಕು.

ಫಾರೆಸ್ಟರನ್ನು ಕರೆತಂದು ಮಹಜರು ಮಾಡಿಸುವುದೂ ಕಷ್ಟದ, ಪರದಾಟದ ಕೆಲಸವಾಗುತ್ತಿದ್ದು, ಎಷ್ಟೋ ರೈತರು (ಮುಖ್ಯವಾಗಿ ಸಿರಿಮನೆ ಕಡೆಯವರು) ಪ[...] ಅರ್ಜಿ ಹಾಕುವುದನ್ನೇ ನಿಲ್ಲಿಸಿದ[...] ವ್ಯರ್ಥ ತಿರುಗಾಟ ತಪ್ಪಿಸಿ, ಒಮ್ಮೆ[...] ಕೊಡಲಿಕ್ಕೆ, ಇನ್ನೊಮ್ಮೆ ಪರಿಹಾ[...] ಪಡೆಯಲಿಕ್ಕೆ–ಹೀಗೆ ಎರಡೇ ತಿರು[...] ಳಗೆ ಪರಿಹಾರ ಸಿಗುವಂತೆ ಏರ್ಪಡಿ[...] ರಿಕಾರ್ಡುಗಳನ್ನು ಅಡ್ಡಾದಿಡ್ಡಿ ತ[...] ಯಾರಿಸುವುದು ತಪ್ಪಬೇಕು; [...] ಹಣದ ಚೆಕ್ಕನ್ನು ಹತ್ತಿರದ ಬ್ಯಾ[...] ಪಾವ್ತಿಯಾಗುವಂತೆ ಕೊಡಬೇಕು[...]

ಕೊನೆಯದಾಗಿ, ರೈತರ ಬ[...] **ವನ್ನು ಮತ್ತೊಮ್ಮೆ** ಧ್ವನಿಸು[...] **ರೆ– ಇವುಗಳಲ್ಲಿ** ಆದಷ್ಟು ಹು[...] **ಬೋನಿನಲ್ಲಿ ಹಿಡಿದು** ಅಭಯಾ[...] **ಸಾಗಿಸಬೇಕು.**

ಶಾಸಕರು ಮತ್ತು ಅಧಿ[...] **ಈ ಬಗ್ಗೆಯೂ ಗಮನ** ಹರಿಸ[...]

"ಆಶಾಕಿರಣ"

(2ನೇ ಪುಟದಿಂದ)

ದರಿಯರಲ್ಲಿ ಹಿರಿಯವರು–ಈ ಕ[...] ಇಷ್ಟು ಜನ ಮಾತ್ರ ಪರಿಹಾರಕ್ಕೆ[...] ಹಾಕಬಹುದು.

ಹೆಚ್ಚಿನ ವಿವರಗಳನ್ನು ಸಂಬ[...] ಗ್ರಾಮಲೆಕ್ಕಿಗರು ಅಥವಾ ಪುರಸಭೆ[...] ಧಿಕಾರಿಗಳು ಅಥವಾ ಕ್ಷೇತ್ರಾಭಿವೃ[...] ಕಾರಿಗಳಿಂದ ಪಡೆಯಬಹುದು.